ಮಂತ್ರಿಗಳ ಪ್ಯಾಕೇಜ್‌ದಲ್ಲಿ ಸೇರಿಸಬೇಕು. ಇದನ್ನು ನೀವು SFC grant ನಲ್ಲಿ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಕಾನೂನಿನ ತೊಡಕು ಇದೆ. ನಾವು ಪತ್ರ ಬರೆದು ಕೊಟ್ಟಿದ್ದೇವೆ.

ಅಧ್ಯಕ್ಷರು :- ನಿಲುವಳಿ ಸೂಚನೆ ಯಾವ ಸದಸ್ಯರು ಕೇಳುತ್ತಾರೆ ಅವರಿಗೆ ಅಷ್ಟೇ.

ಶ್ರೀ ಬಸವರಾಜ ಬೊಮ್ಮಾಯಿ:- ಬೆಳಗಾಂ ಜಿಲ್ಲೆಯ ಅಭಿವೃದ್ಧಿ ವಿಷಯದಲ್ಲಿ ಪಕ್ಷ ಭೇದ ಇಲ್ಲ. ಭಾಷೆ ಭೇದವೂ ಇಲ್ಲ ಎನ್ನುವುದಕ್ಕೆ ಪುರಾವೆ ಇಲ್ಲಿಯೇ ಇದೆ. ಉತ್ತರದಲ್ಲಿ ನಾವು ಪುರಸಭೆಯಿಂದ ಅನುದಾನ ನಿರೀಕ್ಷೆ ಮಾಡಿದ್ದೇವೆ ಎಂದು ಇದ್ದರೂ ಕೂಡ ಮಾನ್ಯ ಪ್ರಕಾಶ್ ಹುಕ್ಕೇರಿಯವರು ಈ ವಿಷಯವನ್ನು ನಮ್ಮ ಗಮನ ಸೆಳೆದ ಮೇಲೆ ನಾವು ಅದಕ್ಕೆ ಕಾಯುವುದಿಲ್ಲ. ಮೈನರ್ ಇರಿಗೇಷನ್‌ನಲ್ಲಿ ಆ ಹಣವನ್ನು ಒದಗಿಸಿ ಆದಷ್ಟು ಬೇಗ ಕಾಮಗಾರಿಯನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :- ಮಾನ್ಯ ಅಧ್ಯಕ್ಷರೆ, ಯಾವ ವೇಳೆಯಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಬೊಮ್ಮಾಯಿಯವರನ್ನು ಜಿಲ್ಲಾ ಉಸ್ತುವಾರಿ ಸಚಿವರನ್ನಾಗಿ ಮಾಡಿದರು ಆಗಲೇ ನಮಗೆ ಬಹಳ ಸಂತೋಷವಾಯಿತು. ಹಾಗಾಗಿ ನೀವು ನಮ್ಮ ಜಿಲ್ಲಾ ಉಸ್ತುವಾರಿ ಸಚಿವರಾಗಿ ನಾಲ್ಕುವರೆ ವರ್ಷ ಇರಲಿ ಎಂದು ನಾವು ನಿಮ್ಮನ್ನು ಬೇಡಿಕೊಳ್ಳುತ್ತೇವೆ.

ಡಾ॥ ವಿ.ಎಸ್. ಆಚಾರ್ಯ: (ಗೃಹ ಸಚಿವರು) :- ಸಿರಾ ಘಟನೆ ಬಗ್ಗೆ ಮಾನ್ಯ ಪ್ರತಿಪಕ್ಷದ ಶಾಸಕರು ನನ್ನ ಗಮನ ಸೆಳೆದಿದ್ದರು. ಪ್ರಾರಂಭಿಕ ಮಾಹಿತಿ ಬಂದಿದೆ. ಸಿರಾ ದಲ್ಲಿ ಸದುದ್ದೇಶದಿಂದಲೇ ಹೊರಟಂತಹ ಒಂದು ಮೆರವಣಿಗೆ ಶಾಂತ ರೀತಿಯಿಂದ ಹೋಗುತ್ತಿರುವಾಗ ಅದರ ಗುರುತಾದ ದಾರಿಯಿಂದ ಬದಲಾವಣೆ ಆಗಬಹುದು ಎಂದು ಹೇಳುವಂತಹ ಸಂದರ್ಭದಲ್ಲಿ ಪೋಲಿಸರು ಅಲ್ಲಿ ಮಧ್ಯಪ್ರವೇಶ ಮಾಡಿದ್ದಾರೆ. ಅವರು ಮೊದಲು ಕೊಟ್ಟ ದಾರಿಯಲ್ಲಿಯೇ ಹೋಗಬೇಕೆಂದು ಹೊರಟಿದ್ದರು. ಅಷ್ಟರಲ್ಲಿ ಆ ಮೆರವಣಿಗೆ ಮೇಲೆ ಒಂದು ಕಲ್ಲು ಬಿದ್ದಿತು ಎಂದು ತಿಳಿಯಿತು. ಗುಂಪನ್ನು ಚದುರಿಸಲಿಕ್ಕೆ ಪೋಲಿಸರು ಸ್ವಲ್ಪ ಲಘು ಲಾಠಿ ಪ್ರಹಾರ ಮಾಡಿದ್ದಾರೆ. ಅದಕ್ಕಿಂತ ಹೆಚ್ಚಿಗೆ ಏನೂ ಮಾಡಲಿಲ್ಲ. ಈ ಒಂದು ಗಲಭೆಯಲ್ಲಿ ನಾಲ್ಕು ಜನರಿಗೆ ಸ್ವಲ್ಪ out patient ಆಗಿ ಚಿಕಿತ್ಸೆ ಕೊಡುವ ರೀತಿಯಲ್ಲಿ ಚಿಕಿತ್ಸೆ ಕೊಡಬೇಕಾಯಿತು. ಇದೇ ಮೆರವಣಿಗೆಯವರಿಗೆ ಸಂಬಂಧಪಟ್ಟ ಒಬ್ಬ

ರಿಕ್ಷಾ ಡ್ರೈವರ್‌ಗೆ ಬ್ಲೇಡ್‌ನ ಗಾಯವಾಗಿದೆ. ಎನ್ನುವುದು ಒಂದು, he is out of danger , there is no problem. ತಮಗೆ ಬಂದಿರುವ ಮಾಹಿತಿ ಪ್ರಕಾರ ಎಲ್ಲಿಯೂ ಬೆಂಕಿ ಇತ್ಯಾದಿಗಳ ಪ್ರಕರಣಗಳು ಇಲ್ಲ. 4.40 ನಿಮಿಷಕ್ಕೆ 144 ಸೆಕ್ಷನ್ ಹಾಕಿದ್ದಾರೆ. ಪರಿಸ್ಥಿತಿ ಸಂಪೂರ್ಣ ನಿಯಂತ್ರಣದಲ್ಲಿದೆ. ಜಿಲ್ಲಾ ಪೋಲಿಸ್ ಅಧಿಕಾರಿ ಅಲ್ಲಿ ಕ್ಯಾಂಪ್ ಮಾಡಿದ್ದಾರೆ. ಹಾಗಾಗಿ ಸದ್ಯಕ್ಕೆ ಯಾವ ಚಿಂತೆಗೆ ಕಾರಣ ಇಲ್ಲ.

ಶ್ರೀ ಆರ್. ರೋಷನ್ ಬೇಗ್ :- Rapid action Force ಕಳುಹಿಸಿದ್ದೀರೋ ಹೇಗೆ?

ಡಾ॥ ವಿ.ಎಸ್. ಆಚಾರ್ಯ:- Things are alright they settle down. Except deviation ಪ್ರಶ್ನೆ ಬಂದಾಗ ಸ್ವಲ್ಪ ಕಮೋಷನ್ ಆಗಿರಬೇಕು. ಆ ಮೇಲೆ ಈ ಕ್ರಮಗಳೆಲ್ಲಾ ಆಯಿತು. There is no burning.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅದಕ್ಕೋಸ್ಕರ ನಿಮಗೆ ಹೇಳಿದ್ದು. ಸಂಪೂರ್ಣವಾದ ಮಾಹಿತಿ ತಂದು ನೀವು ಕೊಟ್ಟರೆ ಒಳ್ಳೆಯದಾಗುತ್ತದೆ. ನಮಗೆ ಬಂದಿರುವ ಮಾಹಿತಿ ಪ್ರಕಾರ ಅಲ್ಲಿ ಅಂಗಡಿಗಳು ಸುಟ್ಟಿವೆ. ಅಂಗಡಿಗಳ ಮೇಲೆ ಕಲ್ಲು ಹೊಡೆದಿದ್ದಾರೆ. ಅನೇಕ ಅಂಗಡಿಗಳನ್ನು ಡ್ಯಾಮೇಜ್ ಮಾಡಿದ್ದಾರೆ. ಬಸ್‌ಸ್ಟ್ಯಾಂಡ್‌ನಲ್ಲಿ ಸಣ್ಣ ಸಣ್ಣ ಬುಟ್ಟಿಗಳನ್ನು ರಸ್ತೆ ಮೇಲೆ ಇಟ್ಟು ಮಾರಾಟ ಮಾಡುವವರನ್ನು ಹಾನಿಗೊಳಿಸಿದ್ದಾರೆ. ಯಾರೋ ಒಬ್ಬರು ಕಲ್ಲು ಹೊಡೆದರು ಎನ್ನತಕ್ಕಂತಹ ಕಾರಣದ ಮೇಲೆ ಈ ಗಲಾಟೆ ಆಗಿದ್ದರೆ ಅದಕ್ಕೆ ತಾವು ಸವಿಸ್ತಾರವಾದ ಮಾಹಿತಿ ತಂದು ರೈಟಿಂಗ್‌ನಲ್ಲಿ statement ಮಾಡಿದರೆ ನಮಗೂ ಕೂಡ ಗೊತ್ತಾಗುತ್ತದೆ.

ಅಧ್ಯಕ್ಷರು :- Writing ನಲ್ಲಿ statement ಮಾಡಿ ಬಿಡಿ.

ಡಾ॥ ವಿ.ಎಸ್. ಆಚಾರ್ಯ:- ನಾನು ಭರವಸೆ ಕೊಟ್ಟ ಪ್ರಕಾರ ಅತೀ ಶೀಘ್ರವಾಗಿ ನಮ್ಮ ಅಧಿಕಾರಿಗಳು ಹಾಗೂ ಕಾರ್ಯದರ್ಶಿಗಳ ಮುಖಾಂತರ ಮಾಹಿತಿ ತರಿಸುತ್ತೇನೆ. ಇನ್ನು ಹೆಚ್ಚಿಗೆ ಏನಾದರೂ ಹೇಳುವುದಿದ್ದರೆ, ...